# ಕೋವಿಡ್-19 ಜನಜಾಗೃತಿ ಮತ್ತು ಪರಿಹಾರ ಆಂದೋಲನ
## COVID -19 RELIEF AND AWARENESS CAMPAIGN

ಕೋವಿಡ್-19ರ ಸಾಂಕ್ರಾಮಿಕ ಸೋಂಕು ಕಾಯಿಲೆ ಬಂದ ನಂತರ ಜನಜೀವನ ಅಸ್ತವ್ಯಸ್ತವಾಗಿದ್ದು, ಇದರ ಪರಿಣಾಮವಾಗಿ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಕೊರತೆಯಿಂದಾಗಿ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರಿರುತ್ತದೆ. ಅದರಲ್ಲೂ ಮಕ್ಕಳ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಆರೋಗ್ಯ ಹಾಗೂ ಕಲಿಕೆಯ ಮೇಲೂ ಪರಿಣಾಮ ಬೀರಿರುವುದು ಗಮನಾರ್ಹ ಅಂಶವಾಗಿದೆ.

ಈ ನಿಟ್ಟಿನಲ್ಲಿ ಪಡಿ ಸಂಸ್ಥೆಯು ಕಳೆದೆರಡು ವರ್ಷಗಳಿಂದ ಕೋವಿಡ್-19 ಸಾಂಕ್ರಾಮಿಕ ಹರಡದಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಜನಜಾಗೃತಿ ಹಾಗೂ ಸೋಂಕಿನಿಂದ ನೊಂದವರಿಗೆ ಪರಿಹಾರ ನೀಡುವ ಮತ್ತು ಸುದಾರಣಾ ಅಂಶಗಳ ಬಗೆಗಿನ ಸಮೀಕ್ಷೆಗಳನ್ನು ನಡೆಸುತ್ತಿದ್ದು ಆಂದೋಲನದ ಮೂಲಕ ಶ್ರಮಿಸುತ್ತಾ ಇದೆ. ಈ ಆಂದೋಲನಕ್ಕೆ ಅನೇಕ ದಾನಿಗಳು, ಜನಪ್ರತಿನಿಧಿಗಳು, ಸಂಘಸಂಸ್ಥೆಗಳು, ಇಲಾಖೆಗಳು ಸಹಭಾಗಿತ್ವವನ್ನು ನೀಡುತ್ತಾ ಬಂದಿರುತ್ತದೆ. ಈ ಆಂದೋಲನದಲ್ಲಿ ತಾವೆಲ್ಲರೂ ಭಾಗವಹಿಸಿ ಕೊರೋನಾಮುಕ್ತ ಸಮಾಜ ನಿರ್ಮಾಣದಲ್ಲಿ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಹಾಗಾಗಿ, ಮಕ್ಕಳ ಬದುಕು ಮತ್ತು ಆರೋಗ್ಯದ ಜೊತೆಗೆ ಶಿಕ್ಷಣದ ಜವಾಬ್ದಾರಿಯ ಸಕಲ ವ್ಯವಸ್ಥೆಗಳನ್ನು ಒದಗಿಸುವ ಮೂಲಕ ಶಾಲೆಗಳಿಗೆ ಮಕ್ಕಳನ್ನು ಸ್ವಾಗತಿಸಲು ಶಾಲಾ ಆಡಳಿತವು ಜವಾಬ್ದಾರಿ ವಹಿಸಬೇಕಾಗಿದೆ. ಮತ್ತು ಕೋವಿಡ್-19 ಸಾಂಕ್ರಾಮಿಕ ಹರಡದಂತೆ ಶಾಲಾ ಮಕ್ಕಳ ಸುರಕ್ಷತೆಗಾಗಿ ಮತ್ತು ಕೊರೊನಾ ಮುಕ್ತ ಶಾಲಾ ಪರಿಸರದಲ್ಲಿ ಕಲಿಕಾಪೂರಕ ವಾತಾವರಣ ನಿರ್ಮಿಸುವಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಮಾಡಬೇಕಾಗಿರುವ ಮುಂಜಾಗೃತಾ ಕ್ರಮಗಳ ಅಂಶಗಳ ಪಟ್ಟಿಯನ್ನು ಮಾಡಲಾಗಿದ್ದು ಈ ಪಟ್ಟಿಯಲ್ಲಿರುವ ಅಂಶಗಳನ್ನು ಎಸ್‌ಡಿಎಂಸಿ ಯು ತನ್ನ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿಕೊಳ್ಳಬಹುದಾಗಿದೆ.

# ಕೊರೋನಾ ಸೋಂಕುಮುಕ್ತ ಶಾಲಾ ಶಿಕ್ಷಣದಲ್ಲಿ ಎಸ್‌ಡಿಎಂಸಿ ಪರಿಶೀಲನಾ ಪಟ್ಟಿ

1. ಶಾಲಾ ಎಸ್‌ಡಿಎಂಸಿಯು ತನ್ನ ಶಾಲಾ ವ್ಯಾಪ್ತಿಯ 6 ರಿಂದ 14 ವರ್ಷದ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡುವ ಜವಾಬ್ದಾರಿ ವಹಿಸುತ್ತಿದೆ.
2. ಶಾಲಾ ಎಸ್‌ಡಿಎಂಸಿಯು ಶಾಲೆಗೆ ದಾಖಲಾದ ಎಲ್ಲಾ ಮಕ್ಕಳೂ ಪ್ರತೀ ದಿನ ಶಾಲೆಗೆ ಬರುವಂತೆ ನಿರಂತರ ಕ್ರಮಕೈಗೊಳ್ಳುತ್ತಿದೆ.
3. ಶಾಲಾ ಎಸ್‌ಡಿಎಂಸಿಯು ಕೊರೊನಾ ಸೋಂಕು ಹೆಚ್ಚಾಗಿ ಶಾಲೆಗಳು ಮುಚ್ಚಲ್ಪಡುವ ಸಂದರ್ಭದಲ್ಲಿ ದಿನ ಬಿಟ್ಟು ದಿನ ಅಥವಾ ವಾರಕ್ಕೆ ಕನಿಷ್ಟ 2 ದಿನ ತರಗತಿವಾರು ಎಲ್ಲಾ ಮಕ್ಕಳೂ ಶಾಲೆಗೆ ಬರುವಂತೆ ಕ್ರಮ ವಹಿಸುತ್ತಿದೆ.
4. ಶಾಲಾ ಎಸ್‌ಡಿಎಂಸಿಯು ಕನಿಷ್ಟ ತಿಂಗಳಿಗೊಂದಾವರ್ತಿ ತರಗತಿವಾರು ಮಕ್ಕಳ ಪೋಷಕರನ್ನು ಶಾಲೆಗೆ ಕರೆದು ಮಕ್ಕಳ ಶಾಲಾ ಶಿಕ್ಷಣದ ಬಗ್ಗೆ ಪೋಷಕರೊಂದಿಗೆ ಚರ್ಚಿಸುತ್ತಿದೆ.
5. ಶಾಲಾ ಎಸ್‌ಡಿಎಂಸಿಯು ಮಕ್ಕಳ ಶಿಕ್ಷಣ ಖಾತರಿಪಡಿಸುವುದಕ್ಕಾಗಿ ತಮ್ಮ ಶಾಲಾ ವ್ಯಾಪ್ತಿಯಲ್ಲಿ ಲಭ್ಯವಿರುವ ಶಿಕ್ಷಣಾಸಕ್ತರನ್ನು ಪದವೀದರ ನಿರುದ್ಯೋಗಿಗಳನ್ನು, ಗುರುತಿಸಿ ತಮ್ಮ ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಿಸುವ ಚಟುವಟಿಕೆಗಳನ್ನು ನಡೆಸುತ್ತಿದೆ.
6. ಶಾಲಾ ಎಸ್‌ಡಿಎಂಸಿಯು ತಮ್ಮ ಶಾಲೆಯಲ್ಲಿ ಬಿಸಿಯೂಟ ತಯಾರು ಮಾಡುವ ಸ್ಥಳ, ಬಿಸಿಯೂಟ ತಯಾರಿಸುವ ಕಾರ್ಯಕರ್ತರು ಮತ್ತು ಉಪಯೋಗಿಸುವ ಆಹಾರ ಪದಾರ್ಥಗಳನ್ನು ಬಳಸುವಾಗ ಕೋವಿಡ್ ಸೋಂಕು ಹರಡದಂತೆ ಗಮನಹರಿಸಿ, ಮಕ್ಕಳಿಗೆ ಒದಗಿಸುವಂತೆ ನೋಡಿಕೊಳ್ಳುತ್ತಿದೆ.
7. ಶಾಲಾ ಎಸ್‌ಡಿಎಂಸಿಯು ಪ್ರತೀದಿನ ಶಾಲೆಗೆ ಹಾಜರಾಗುವ ಎಲ್ಲಾ ತರಗತಿವಾರು ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಬಿಸಿಯೂಟವನ್ನು ನೀಡುತ್ತಿದೆ.
8. ಶಾಲಾ ಎಸ್‌ಡಿಎಂಸಿಯು ತಮ್ಮ ಶಾಲಾ ಮಕ್ಕಳಿಗೆ ಕಾಲಕಾಲಕ್ಕೆ ಆರೋಗ್ಯ ಇಲಾಖೆಗಳಿಂದ ನೀಡಲಾಗುವ ರಕ್ತಹೀನತೆ ಬಾರದಂತೆ ನೀಡಲಾಗುವ ಕಬ್ಬಿಣಾಂಶವುಳ್ಳ ಮತ್ತು ಜಂತುಹುಳದ ಗುಳಿಗೆಗಳನ್ನು ನೀಡಲಾಗುತ್ತಿದೆ.

9. ಶಾಲಾ ಎಸ್‌ಡಿಎಂಸಿಯು ಪ್ರತಿದಿನವೂ ಮಕ್ಕಳ ಆರೋಗ್ಯ ತಪಾಸಣೆ ಕೈಗೊಳ್ಳಲು ದೇಹದ ಉಷ್ಣತೆಯನ್ನು ಅಳೆಯುವ ಥರ್ಮಾಮೀಟರನ್ನು ಹೊಂದಿರುತ್ತದೆ.

10. ಶಾಲಾ ಎಸ್‌ಡಿಎಂಸಿಯು ಈ ಥರ್ಮಾಮೀಟರನ್ನು ಬಳಸಿ, ಪ್ರತೀದಿನವೂ ಶಾಲೆಗೆ ಹಾಜರಾಗುವ ಎಲ್ಲಾ ಮಕ್ಕಳ ದೇಹದ ಉಷ್ಣತೆಯನ್ನು ಪರಿಶೀಲಿಸುತ್ತದೆ.

11. ಶಾಲಾ ಎಸ್‌ಡಿಎಂಸಿಯು ಮಕ್ಕಳ ಆರೋಗ್ಯದ ಏರುಪೇರುಗಳಿದ್ದಲ್ಲಿ ಮಕ್ಕಳ ಪೋಷಕರಿಗೆ ತಿಳಿಸಲಾಗುತ್ತಿದೆ.

12. ಶಾಲಾ ಎಸ್‌ಡಿಎಂಸಿಯು ಮಕ್ಕಳ ಆರೋಗ್ಯದ ಏರುಪೇರುಗಳಿದ್ದಲ್ಲಿ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ಕೋವಿಡ್ ಸೆಂಟರ್‌ಗೆ ತಿಳಿಸುತ್ತಿದೆ.

13. ಶಾಲಾ ಎಸ್‌ಡಿಎಂಸಿಯು ಪೋಷಕರು ಮನೆಯಲ್ಲಿ ಮಕ್ಕಳನ್ನು ರಕ್ಷಿಸುವ ಕಾರ್ಯವಿಧಾನದ ಬಗೆಗೆ ಪೋಷಕರಿಗೆ ನಿರಂತರ ಮಾಹಿತಿ ನೀಡುತ್ತಿದೆ. (ಮಾಸ್ಕ್, ಸ್ಯಾನಿಟೈಸರ್ ಬಳಕೆ, ಆಹಾರ ಪದಾರ್ಥಗಳನ್ನು ಸೇವಿಸುವ ಮೊದಲು ಕೈ ತೊಳೆಯುವುದು, ಮಾರ್ಕೆಟ್‌ನಿಂದ ಯಾವುದೇ ಆಹಾರ ಯಾ ವಸ್ತುಗಳನ್ನು ತಂದಾಗ ಅದನ್ನು ಬಳಸುವ ಮೊದಲು ಕೈಗಳನ್ನು ಸ್ಯಾನಿಟೈಸರ್ ಮೂಲಕ ಸ್ವಚ್ಛಗೊಳಿಸುವುದು ಶಾಲೆಗೆ ಹೋಗುವಾಗ ಕೈ ಒರಸಲು ಪ್ರತಿನಿತ್ಯ ಶುಭ್ರ ಬಟ್ಟೆಯನ್ನು ಮಕ್ಕಳಿಗೆ ನೀಡುವುದು ಇತ್ಯಾದಿ)

14. ಶಾಲಾ ಎಸ್‌ಡಿಎಂಸಿಯು ಶಾಲಾ ಶಿಕ್ಷಕರ ಮೂಲಕ ಮಕ್ಕಳಲ್ಲಿ ಕ್ರಿಯಾಶೀಲತೆ ಮತ್ತು ನಾಯಕತ್ವ ಬೆಳೆಸುವಲ್ಲಿ ಶಿಕ್ಷಣಾಸಕ್ತ ಸ್ವಯಂಸೇವಕರ ಸಹಾಯವನ್ನು ಪಡೆಯಲಾಗುತಿದೆ.

15. ಶಾಲಾ ಎಸ್‌ಡಿಎಂಸಿಯು ತರಗತಿವಾರು ಮಕ್ಕಳಿಗೆ ಬೋಧಿಸುವ ಕಾರ್ಯವಿದಾನಗಳ ಬಗ್ಗೆಶಿಕ್ಷಕರೊಂದಿಗೆ ಚರ್ಚೆ ನಡೆಸಿ, ಶಿಕ್ಷಣಾಸಕ್ತ ಸ್ವಯಂಸೇವಕರ ಸಹಾಯದಿಂದ ಮಕ್ಕಳ ಮನೆಬೇಟಿ ಮತ್ತು ಕಲಿಕಾ ಪ್ರಕ್ರಿಯೆಗಳ ಮೇಲ್ವಿಚಾರಣೆ ನಡೆಸುತ್ತಿದೆ. (ಉದಾ: ರೇಡಿಯೋ ಪಾಠ, ಟೆಲಿಗ್ರಾಂ ಆಪ್, ವಾಟ್ಸಾಪ್, ಝೂಮ್, ವೀಡಿಯೋ, ಸ್ವಯಂಸೇವಕರ ಮೂಲಕ)

16. ಶಾಲಾ ಎಸ್‌ಡಿಎಂಸಿಯು ಶಿಕ್ಷಕರ ಅನುಕೂಲಕ್ಕಾಗಿ ಸ್ಥಳೀಯವಾಗಿ ನೇಮಕಗೊಂಡ ಶಿಕ್ಷಣಾಸಕ್ತ ಸ್ವಯಂಸೇವಕರ ತಂಡದೊಂದಿಗೆ ನಿರಂತರ ಸಮಾಲೋಚನೆಯನ್ನು

ನಡೆಸಿ ಶಾಲೆಗೆ ದಾಖಲಾದ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳನ್ನು ಮೇಲ್ವಿಚಾರಣಾ ಕ್ರಮಗಳನ್ನು ಕೈಗೊಳ್ಳುತ್ತಿದೆ.

17. ಶಾಲಾ ಎಸ್‌ಡಿಎಂಸಿಯು ಶಿಕ್ಷಕರು ಮಕ್ಕಳಿಗೆ ನೀಡಬಹುದಾದ ಸ್ಥಳೀಯ ಶೈಕ್ಷಣಿಕ ಪಠ್ಯಕ್ರಮ ಹಾಗೂ ಪಠ್ಯ ವಸ್ತುಗಳ ಚಟುವಟಿಕೆಗಳ ಬಗ್ಗೆ ತಯಾರಿಸುವಂತೆ ನೋಡಿಕೊಳ್ಳುತ್ತಿದೆ.

18. ಶಾಲಾ ಎಸ್‌ಡಿಎಂಸಿಯು ಶಿಕ್ಷಕರ ಮೂಲಕ ಶಿಕ್ಷಣಾಸಕ್ತ ಸ್ವಯಂಸೇವಕರಿಗೆ ಅವರು ತಯಾರಿಸಿರುವ ಸ್ಥಳೀಯ ಪಠ್ಯಕ್ರಮ ಹಾಗೂ ಪಠ್ಯ ವಸ್ತುಗಳ ಚಟುವಟಿಕೆಗಳ ಬಗ್ಗೆ ತಿಳುವಳಿಕೆಯನ್ನು ನೀಡಿ ಅನುಷ್ಠಾನಿಸುವಂತೆ ತರಬೇತುಗೊಳಿಸುತ್ತಿದೆ.

19. ಶಾಲಾ ಎಸ್‌ಡಿಎಂಸಿಯು ಸ್ಥಳೀಯ ಸರಕಾರ ಮಟ್ಟದಲ್ಲಿರುವ ಶಿಕ್ಷಣಪಡೆ ಸಮಿತಿ ಸಭೆಯಲ್ಲಿ ನಿರಂತರವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುತ್ತಿದೆ.

20. ಶಾಲಾ ಎಸ್‌ಡಿಎಂಸಿಯು ಈ ಶಿಕ್ಷಣಪಡೆಯಲ್ಲಿ ತನ್ನ ಶಾಲಾ ಮಕ್ಕಳ ಶೈಕ್ಷಣಿಕ ಆರೋಗ್ಯ ಮತ್ತು ರಕ್ಷಣೆಯ ಭಾಗವಾಗಿ ಅನುಷ್ಠಾನಿಸಿರುವ ಮತ್ತು ಅನುಷ್ಠಾನಿಸಲಿರುವ ಕುರಿತು ವರದಿ ಸಲ್ಲಿಸುತ್ತಿದೆ ಮತ್ತು ಅಗತ್ಯ ಬೇಡಿಕೆಗಳನ್ನು ಸಲ್ಲಿಸುತ್ತಿದೆ.

21. ಶಾಲಾ ಎಸ್‌ಡಿಎಂಸಿಯು ತರಗತಿ ಕೋಣೆಯಲ್ಲಿ ಗರಿಷ್ಟ ಪ್ರತೀ ಎರಡು ಮಕ್ಕಳಿಗೆ ಒಂದು ಬೆಂಚ್ ಮತ್ತು ಒಂದು ಡೆಸ್ಕ್‌ಗಳನ್ನು ಒದಗಿಸುತ್ತಿದೆ.

22. ಶಾಲಾ ಎಸ್‌ಡಿಎಂಸಿಯು ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಕೈಕಾಲುಗಳನ್ನು ತೊಳೆಯಲು ನೀರಿನ ಘಟಕಗಳನ್ನು ಒದಗಿಸುತ್ತಿದೆ.

23. ಶಾಲಾ ಎಸ್‌ಡಿಎಂಸಿಯು ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಕೈಕಾಲುಗಳನ್ನು ತೊಳೆಯಲು ಇರುವ ನೀರಿನ ಘಟಕಗಳಲ್ಲಿ ಸಾಕಷ್ಟು ಪ್ರಮಾಣದ ನೀರಿನ ಸೌಲಭ್ಯವನ್ನು ನಿರಂತರವಾಗಿ ಒದಗಿಸುತ್ತಿದೆ.

24. ಶಾಲಾ ಎಸ್‌ಡಿಎಂಸಿಯು ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಕೈಕಾಲುಗಳನ್ನು ತೊಳೆಯಲು ಇರುವ ನೀರಿನ ಘಟಕಗಳಲ್ಲಿ ಹ್ಯಾಂಡ್ ಸ್ಯಾನಿಟೈಸರ್/ಸೋಪ್ ವ್ಯವಸ್ಥೆಯನ್ನು ಒದಗಿಸುತ್ತಿದೆ.

25. ಶಾಲಾ ಎಸ್‌ಡಿಎಂಸಿಯು ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಸ್ವಚ್ಛಗೊಳಿಸಿದ ಕೈಗಳನ್ನು ಒಣಗಿಸಲು ಮನೆಯಿಂದ ತಂದಿರುವ ಶುಭ್ರವಾದ ಬಟ್ಟೆಯನ್ನು ಉಪಯೋಗಿಸುವಂತೆ ಮೇಲ್ವಿಚಾರಣೆ ನಡೆಸುತ್ತಿದೆ.

26. ಶಾಲಾ ಎಸ್‌ಡಿಎಂಸಿಯು ತಮ್ಮ ಶಾಲೆಯಲ್ಲಿ ಕೋವಿಡ್ ಮುನ್ನೆಚ್ಚರಿಕೆಯಾಗಿ ಸಂಪೂರ್ಣ ಸುಸಜ್ಜಿತವಾದ ಮತ್ತು ಸ್ವಚ್ಛತೆಯ ಎಲ್ಲಾ ವ್ಯವಸ್ಥೆಗಳನ್ನು ಹೊಂದಿರುವ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವು ಕಾರ್ಯಾಚರಿಸುವಂತೆ ನೋಡಿಕೊಳ್ಳುತ್ತಿದೆ.

27. ಶಾಲಾಎಸ್‌ಡಿಎಂಸಿಯು ತಮ್ಮ ಶಾಲೆಯಲ್ಲಿ ಕೋವಿಡ್ ಸೋಂಕಿನ ಮುನ್ನೆಚ್ಚರಿಕಾ ವ್ಯವಸ್ಥೆಗಾಗಿ ಶುದ್ಧ ಕುಡಿಯುವ ಬಿಸಿನೀರಿನ ವ್ಯವಸ್ಥೆಗಳನ್ನು ಶಾಲಾ ತರಗತಿಗಳಲ್ಲಿ ಎಲ್ಲಾ ಮಕ್ಕಳಿಗೂ ಲಭ್ಯವಾಗುವಂತೆ ಸಾಕಷ್ಟು ಪ್ರಮಾಣದಲ್ಲಿ ಒದಗಿಸುತ್ತದೆ.

28. ಶಾಲಾ ಎಸ್‌ಡಿಎಂಸಿಯು ಕೋವಿಡ್ ಸೋಂಕಿನಿಂದ ಮಕ್ಕಳು ಪೋಷಕರನ್ನು ಕಳಕೊಂಡಲ್ಲಿ ಸಂಬಂಧಪಟ್ಟ ಸಹಾಯವಾಣಿಗೆ ತಿಳಿಸುವಂತೆ ಸಮುದಾಯಕ್ಕೆ ಜಾಗೃತಿ ಮೂಡಿಸುತ್ತಿದೆ.

29. ಶಾಲಾ ಎಸ್‌ಡಿಎಂಸಿಯು ತರಗತಿವಾರು ನಡೆಯುವ ಶಾಲಾ ದಿನಗಳಲ್ಲಿ ಹಾಜರಾಗಬೇಕಾಗಿದ್ದ ಮಕ್ಕಳು ಹಾಜರಾಗದಿದ್ದ ಪಕ್ಷದಲ್ಲಿ ಮಕ್ಕಳು ಶಾಲೆಗೆ ಹಾಜರಾಗುವಂತೆ ಪೋಷಕರಿಗೆ ಅರಿವು ಮೂಡಿಸುತ್ತಿದೆ.

30. ಶಾಲಾ ಎಸ್‌ಡಿಎಂಸಿಯು ನಿರಂತರ ಗೈರುಹಾಜರಾಗುವ ಮಕ್ಕಳಿಗೆ ಗ್ರಾಮ ಶಿಕ್ಷಣ ಪಡೆಯ ಸಹಾಯದಿಂದ ಮಕ್ಕಳು ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳುತ್ತಿದೆ.

31. ಶಾಲಾ ಎಸ್‌ಡಿಎಂಸಿಯು ನಿರಂತರ ಗೈರು ಹಾಜರಾಗುತ್ತಿರುವ ಮಕ್ಕಳು ಬಾಲ್ಯವಿವಾಹ, ಬಾಲಕಾರ್ಮಿಕತೆ, ಮಾರಾಟ ಸಾಗಾಟದಂತಹ ಘಟನೆಗಳು ನಡೆದಲ್ಲಿ ಸಂಬಂಧ ಪಟ್ಟಪ್ರಾಧಿಕಾರಗಳ ಗಮನಕ್ಕೆ ತರಲಾಗುತ್ತಿದೆ.

32. ಶಾಲಾ ಎಸ್‌ಡಿಎಂಸಿಯು ಕೋವಿಡ್‌ನಿಂದಾಗಿ ಶಾಲೆ ಮುಚ್ಚಿರುವ ಸಂದರ್ಭದಲ್ಲಿ ತನ್ನ ಶಾಲಾ ಮಕ್ಕಳ ಮೇಲೆ ಯಾವುದೇ ರೀತಿಯ ಲೈಂಗಿಕ ಶೋಷಣೆ ಹಾಗೂ ದೌರ್ಜನ್ಯಗಳು ನಡೆಯದಂತೆ ಮಕ್ಕಳು ಹಾಗೂ ಸಮುದಾಯಕ್ಕೆ ನಿರಂತರವಾಗಿ ಅರಿವು ಮೂಡಿಸುತ್ತಿದೆ.

33. ಶಾಲಾ ಎಸ್‌ಡಿಎಂಸಿಯು ತನ್ನ ಶಾಲಾ ಮಕ್ಕಳ ಯಾವುದೇ ರೀತಿಯ ಮಾನಸಿಕ ಖಿನ್ನತೆ, ಅಸ್ವಸ್ಥತೆ ಯಾ ಇನ್ನಿತರ ಲಕ್ಷಣಗಳು ಕಂಡುಬಂದಲ್ಲಿ ಆಪ್ತ ಸಮಾಲೋಚಕರ ಸಲಹೆಗಳನ್ನು ಪಡೆಯಬೇಕಾದ ಅಗತ್ಯತೆಗಳ ಕುರಿತಾಗಿ ಪೋಷಕರು ಹಾಗೂ ಸಮುದಾಯಕ್ಕೆ ಜಾಗೃತಿ ಮೂಡಿಸುತ್ತಿದೆ.

34. ಶಾಲಾ ಎಸ್‌ಡಿಎಂಸಿಯು ಕನಿಷ್ಟ ವಾರಕ್ಕೊಮ್ಮೆ ಶಾಲೆಯ ಇಡೀ ಆವರಣ/ಶಾಲಾ ಕಂಪೌಂಡ್, ಮುಖ್ಯದ್ವಾರ, ಶಾಲಾ ಮೆಟ್ಟಿಲುಗಳನ್ನು ದೂಳು ಒರಸಿ ಸೋಂಕು ನಿವಾರಣಾ ದ್ರಾವಣದಿಂದ ತೊಳೆದು ಶುದ್ಧಗೊಳಿಸುತ್ತಿದೆ.

35. ಶಾಲಾ ಎಸ್‌ಡಿಎಂಸಿಯು ಕನಿಷ್ಟ ವಾರಕ್ಕೊಮ್ಮೆ ಶಾಲಾ ಕಟ್ಟಡದ ಮೇಲ್ಛಾವಣಿ, ಬಾಗಿಲು, ಕಿಟಕಿಗಳ ದೂಳನ್ನು ತೆಗೆದು ಸೋಂಕು ನಿವಾರಣಾ ದ್ರಾವಣದಿಂದ ಸ್ವಚ್ಛಗೊಳಿಸುತ್ತಿದೆ.

36. ಶಾಲಾ ಎಸ್‌ಡಿಎಂಸಿಯು ಕನಿಷ್ಟ ವಾರಕ್ಕೊಮ್ಮೆ ಶಾಲೆಯಲ್ಲಿನ ಎಲ್ಲಾ ತರಗತಿ ಕೋಣೆಗಳು, ಶಿಕ್ಷಕರ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಸಭಾಂಗಣವನ್ನು ಒಳಗೊಂಡಂತೆ ಮಕ್ಕಳು ಮತ್ತು ಶಿಕ್ಷಕರು ಬಳಸುವ ಸ್ಥಳಗಳನ್ನು ಗುಡಿಸಿ, ಸೋಂಕು ನಿವಾರಣಾ ದ್ರಾವಣ (ಕ್ಲೋರಿನ್)ದಿಂದ ತೊಳೆದು ಸ್ವಚ್ಛಗೊಳಿಸುತ್ತಿದೆ.

37. ಶಾಲಾ ಎಸ್‌ಡಿಎಂಸಿಯು ಕನಿಷ್ಟ ವಾರಕ್ಕೊಮ್ಮೆ ಶಾಲಾ ಕೊಠಡಿಯ ಒಳಗಿರುವ ಪೀಠೋಪಕರಣಗಳಾದ ಮೇಜು, ಕುರ್ಚಿ, ಡೆಸ್ಕ್, ಬೆಂಚ್, ಬಾಗಿಲು ಕಿಟಕಿ ಮತ್ತು ಕಾರಿಡಾರ್‌ಗಳಿಗೆ ಅಳವಡಿಸಿರುವ ಹಿಡಿ, ಚಿಲಕ ಮತ್ತು ಸರಳುಗಳನ್ನು ನೀರಿನಿಂದ ತೊಳೆದು, ಹೈಪೋಕ್ಲೋರೈಡ್ ದ್ರಾವಣದಿಂದ ನೈರ್ಮಲೀಕರಣ ಮಾಡುತ್ತಿದೆ.

38. ಶಾಲಾ ಎಸ್‌ಡಿಎಂಸಿಯು ಕನಿಷ್ಟ ವಾರಕ್ಕೊಮ್ಮೆ ಶಾಲೆಯಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ಭಾಗವಾದ ನೀರಿನ ಪಂಪು, ಓವರ್ ಹೆಡ್ ಟ್ಯಾಂಕ್‌ಗಳಲ್ಲಿ ಈಗಾಗಲೇ ಸಂಗ್ರಹವಾಗಿರುವ ನೀರನ್ನು ಖಾಲಿ ಮಾಡಿ ಕ್ಲೋರಿನ್ ಆಧಾರಿತ ಶುಚಿಗೊಳಿಸುವ ಪೌಡರ್‌ನಿಂದ ಸ್ವಚ್ಛಗೊಳಿಸಿ, ಒಣಗಿಸಿ ನಂತರವೇ ಸ್ವಚ್ಛ ನೀರನ್ನು ತುಂಬಿಸುವ ಕ್ರಮವನ್ನು ವಹಿಸುತ್ತಿದೆ.

39. ಶಾಲಾ ಎಸ್‌ಡಿಎಂಸಿ ಯು ಕನಿಷ್ಟ ವಾರಕ್ಕೊಮ್ಮೆ ಶಾಲೆಯಲ್ಲಿನ ಶೌಚಾಲಯ ಮತ್ತು ಮೂತ್ರಾಲಯಗಳನ್ನು 1% ಹೈಪೋಕ್ಲೋರೈಟ್ ದ್ರಾವಣ ಬಳಸಿ ಸ್ವಚ್ಛಗೊಳಿಸಿ ಮಕ್ಕಳ ಬಳಕೆಗೆ ಒದಗಿಸುತ್ತಿದೆ.

40. ಶಾಲಾ ಎಸ್‌ಡಿಎಂಸಿ ಯು ಮಕ್ಕಳು ಶೌಚಾಲಯವನ್ನು ಉಪಯೋಗಿಸಿದ ನಂತರ ಶೌಚಾಲಯವನ್ನು ನೀರಿನಿಂದ ಸ್ವಚ್ಛಗೊಳಿಸಿ ತಮ್ಮ ಕೈಗಳನ್ನು ಸೋಪ್/ ಸ್ಯಾನಿಟೈಸರ್‌ನಿಂದ ತೊಳೆದು, ನಂತರ ತಮ್ಮದೇ ಕರವಸ್ತ್ರ/ನ್ಯಾಪ್ಕಿನ್‌ನಿಂದ ಒರಸಿಕೊಳ್ಳುವ ಅಭ್ಯಾಸವನ್ನು ಮಾಡಿಸುತ್ತಿದೆ.

41. ಶಾಲಾ ಎಸ್‌ಡಿಎಂಸಿಯು ಕನಿಷ್ಟ ವಾರಕ್ಕೊಮ್ಮೆ ಅಕ್ಷರ ದಾಸೋಹದ ಅಡುಗೆ ಕೋಣೆ, ದಾಸ್ತಾನು ಕೊಠಡಿಯಲ್ಲಿನ ಎಲ್ಲ ವಸ್ತುಗಳಾದ ಪಾತ್ರೆಗಳು, ಸ್ಟೌ, ಗ್ಯಾಸ್ ಸಿಲಿಂಡರ್, ಆಹಾರಧಾನ್ಯಗಳನ್ನು ಶೇಖರಣಾ ಡಬ್ಬಗಳು ಇತ್ಯಾದಿಗಳನ್ನು ಡಿಟರ್ಜೆಂಟ್ ಬಳಸಿ ಬಿಸಿ ನೀರಿನಿಂದ ತೊಳೆದು ಒಣಗಿಸಿ ಸ್ವಚ್ಛಗೊಳಿಸುತ್ತಿದೆ.

42. ಶಾಲಾ ಎಸ್‌ಡಿಎಂಸಿ ಯು ಶಾಲೆಗೆ ಆಗಮಿಸುವ ವಿದ್ಯಾರ್ಥಿ/ಪಾಲಕರಿಗೆ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಸೂಚನೆ ನೀಡುತ್ತದೆ ಮತ್ತು ಈ ಬಗೆಗಿನ ಪೋಸ್ಟರ್‌ಗಳನ್ನು/ ಸೂಚನಾಪಲಕಗಳನ್ನು ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸುತ್ತಿದೆ.

43. ಶಾಲಾ ಎಸ್‌ಡಿಎಂಸಿಯು ವಿದ್ಯಾರ್ಥಿಗಳು ಶಾಲಾ ಆವರಣವನ್ನು ಪ್ರವೇಶಿಸುವ ಸಂದರ್ಭದಲ್ಲಿ ಅಥವಾ ಶಾಲಾ ಸಮಯದಲ್ಲಿ ಯಾವುದೇ ಮಗುವಿಗೆ ಕೆಮ್ಮು, ಜ್ವರ, ನೆಗಡಿ, ಮೂಗು ಸೋರುವುದು ಇತ್ಯಾದಿ ಲಕ್ಷಣಗಳಿದ್ದಲ್ಲಿ ಅವರನ್ನು ಶಾಲಾ ಐಸೋಲೇಶನ್ ಕೊಠಡಿಯಲ್ಲಿ ತಾತ್ಕಾಲಿಕವಾಗಿ ಇರಿಸಿಕೊಂಡು ಮಗುವಿನ ಪಾಲಕರನ್ನು ಸಂಪರ್ಕಿಸಿ ಅವರ ಮನೆಗೆ ಕಳುಹಿಸಿಕೊಡಲಾಗುತ್ತಿದೆ.

44. ಶಾಲಾ ಎಸ್‌ಡಿಎಂಸಿಯು ಸೋಂಕಿನ ಲಕ್ಷಣಗಳಿರುವ ಮಕ್ಕಳಿಗೆ ಅಗತ್ಯ ಆರೋಗ್ಯ ಚಿಕಿತ್ಸೆ ಪಡೆದುಕೊಳ್ಳಲು ಕ್ರಮವಹಿಸಿ, ಆರೋಗ್ಯ ಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ನಿಯಮಿತವಾಗಿ ಮಕ್ಕಳ ಆರೋಗ್ಯ ತಪಾಸಣೆಗೆ ಕ್ರಮವಹಿಸುತ್ತಿದೆ.

45. ಶಾಲಾ ಎಸ್‌ಡಿಎಂಸಿಯು ಮಕ್ಕಳನ್ನು ಒಂದು ಕಡೆ ಗುಂಪು ಕೂಡಿಸುವಂತಹ ಸಭೆ, ಸಮಾರಂಭ, ಹಬ್ಬಗಳು ಹಾಗೂ ಇನ್ನಿತರ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳುತ್ತಿದೆ.

46. ಶಾಲಾ ಎಸ್‌ಡಿಎಂಸಿಯು ಶಾಲಾ ಆವರಣದ ಶುಚಿತ್ವ ಮತ್ತು ಶಾಲೆಯಲ್ಲಿನ ಸೌಲಭ್ಯಗಳ ನಿರ್ವಹಣೆಗೆ ಸಮುದಾಯದ ಸಹಕಾರ ಮತ್ತು ನೆರವನ್ನು ಪಡೆಯುತ್ತಿದೆ.

47. ಶಾಲಾ ಎಸ್‌ಡಿಎಂಸಿಯು ಮಕ್ಕಳಿಗೆ ಮಾಸ್ಕ್ ಸ್ಯಾನಿಟೈಸರ್, ಸೋಪ್ ಇತ್ಯಾದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಸಮುದಾಯ, ಪಾಲಕರು ಮತ್ತು ದಾನಿಗಳಿಂದ ಸಹಕಾರ ಪಡೆಯುತ್ತಿದೆ.

48. ಶಾಲಾ ಎಸ್‌ಡಿಎಂಸಿಯು ಶಾಲೆಯು ಸಂಪರ್ಕಿಸಬಹುದಾದ ದೂರದಲ್ಲಿ ವೈದ್ಯಕೀಯ ಸಿಬ್ಬಂದಿ ಲಭ್ಯವಿರುವುದನ್ನು ಖಚಿತಪಡಿಸಿ, ಅಂತಹ ವೈದ್ಯಕೀಯ ಸಿಬ್ಬಂದಿಯ ದೂರವಾಣಿ ಸಂಖ್ಯೆಯನ್ನು ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸುತ್ತಿದೆ.

49. ಶಾಲಾ ಎಸ್‌ಡಿಎಂಸಿಯು ಶಾಲೆಯನ್ನು ಪುನರಾರಂಭಿಸಲು ಮತ್ತು ಕಾಲಕಾಲಕ್ಕೆ ಶಾಲೆಯನ್ನು ಸ್ವಚ್ಛಗೊಳಿಸುವ ಕಾರ್ಯಕ್ಕಾಗಿ ಸ್ಥಳೀಯ ಗ್ರಾಮಪಂಚಾಯತ್/ಪಟ್ಟಣ ಪಂಚಾಯತ್/ಪುರ/ನಗರ/ತಾಲೂಕು/ಜಿಲ್ಲಾಪಂಚಾಯತ್ ಗಳನ್ನು ಸಂಪರ್ಕಿಸಿ ಅವರ ಸಹಕಾರವನ್ನು ಪಡೆಯುತ್ತಿದೆ.

50. ಪ್ರತಿದಿನ ಶಾಲೆ ಪ್ರಾರಂಭದಿಂದ ಶಾಲೆ ಮುಕ್ತಾಯವಾಗುವವರೆಗೂ ಕೋವಿಡ್–19 ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು ಕಡ್ಡಾಯವಾಗಿ ಅನುಸರಣೆಯ ಮೇಲ್ವಿಚಾರಣೆಗಾಗಿ ಓರ್ವ ಶಿಕ್ಷಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿರುತ್ತದೆ.

---

ಪ್ರಕಟಣೆ : **ಪಡಿ, ಮಂಗಳೂರು**

**ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಯೋಜನೆ 2020–2023**

**(ಶಿಕ್ಷಣ ಹಕ್ಕು ಕಾಯಿದೆ 2009ರ ಸಮರ್ಪಕ ಮೇಲುಸ್ತುವಾರಿಗಾಗಿ ಎಸ್‌ಡಿಎಂಸಿ ಸಬಲೀಕರಣ)**

**18 ವರ್ಷದೊಳಗಿನ ಮಕ್ಕಳು ಸಂಕಷ್ಟದಲ್ಲಿದ್ದರೆ**



**ಮಕ್ಕಳ ಸಹಾಯವಾಣಿ 1098ಗೆ ಕರೆಮಾಡಿ**